ಅವರಿಗೆ ಹಣ ಸಹಾಯ ಮಾಡಿ ಎಂದು ಆಜ್ಞೆ ಮಾಡಿಲ್ಲ. ನಾವು ಹಣವನ್ನು ಮಂಜೂರ್ಮಾಡಿ ರಿಲೀಜ್ ಮಾಡಿ ಅಧಿಕಾರಿಗಳಿಗೆ ಕೊಡುತ್ತೇವೆ. ಅವರು ಜವಾಬ್ದಾರಿಯಿಂದ ಆ ಹಣವನ್ನು ಯಾವ ಯಾವ ಉದ್ದೇಶಕ್ಕೆ ಯಾವ ಯಾವ ಜನರಿಗೆ ಕೊಡಬೇಕೋ ಅದನ್ನು ಅವರಿಗೆ ಕೊಡಲೇ ಬೇಕು. ಆಧಕ್ಷತೆ ಯಿಂದಾಗಲಿ ಅಥವಾ ಯಾವುದೋ ಕಾರಣದಿಂದ ತಡಮಾಡಿದ ಪಕ್ಷದಲ್ಲಿ ಅಲ್ಪಸ್ವಲ್ಪ ಹಣ ಉಳಿಯುತ್ತದೆ. ಅದನ್ನು ಸಮಾಜಘಾತಕರಿಗೆ ಕೊಡಿ ಎಂದು ಹೇಳುವುದಿಲ್ಲ. ರೀಅಪ್ರೊಪ್ರಿಯೇಟ್ ಮಾಡಿ ಬೇರೆ ಬೇರೆ ಉದ್ದೇಶಗಳಿಗೆ ಉಪಯೋಗಿಸುತ್ತಾರೆ.

ಶ್ರೀ ಟಿ. ಎಂ. ಮಂಜುನಾಥ್.—ನಾನು ಕೇಳತಕ್ಕ ನಿರ್ದಿಷ್ಟವಾದ ಪ್ರಶ್ನೆ ಇಷ್ಟೆ ತಾವು ಹಣವನ್ನು ಬಡಮಕ್ಕಳಿಗೋಸ್ಕರ, ದೀನದಲಿತರಿಗೋಸ್ಕರ ಅವರ ಹೊಟ್ಟೆ ಬಟ್ಟೆಗೆ ಕೊಡಿ ಎಂದು ಯಾವುದೋ ಇಲಾಖೆಗೆ ಕೊಟ್ಟಿರುತ್ತೀರಿ. ಅದನ್ನು ಖರ್ಚುಮಾಡಲು ನೀವು ೨೫ ಅಥವಾ ೩೦ನೇ ತಾರೀಖೆಂದು ನಿರ್ದಿಷ್ಟವಾಗಿ ಕೊಟ್ಟಿರುವ ಕಾಲ ಕಡಿಮೆ ಇರುವುದರಿಂದ ಆ ಹಣ ಸಂಪೂರ್ಣವಾಗಿ ಸದ್ವಿನಿಯೋಗವಾಗುವುದಿಲ್ಲ ಅದಕ್ಕೋಸ್ಕರ ಸರ್ಕಾರದವರು ಉಳಿದಂತಹ ಹಣವನ್ನು ಬಜೆಟ್ ಈಯರಿಗೆ ಒಂದು ತಿಂಗಳು ಮುಂಚೆ ಕೊಟ್ಟು ಅದು ಸದ್ವಿನಿಯೋಗವಾಗುವುದಕ್ಕೆ ಕಾರ್ಯಕ್ರಮ ತೆಗೆದುಕೊಳುತ್ತೀರಾ ?

ಶ್ರೀ ಎನ್. ರಾಚಯ್ಯ.—ಖಂಡಿತವಾಗಿ ತೆಗೆದುಕೊಂಡಿದ್ದೇವೆ. ೧೫-೨೦ನೇ ತಾರೀಖು ಆಷ್ಟು ಇಷ್ಟು ಹಣ ಉಳಿದಿದ್ದರೆ ಎಲ್ಲವನ್ನು ಕೊಡಬೇಕು, ಕೊನೆಯ ದಿವಸವಾಗಲಿ ಅಥವಾ ಕೊನೆಯ ತಾರೀಖಿನಲ್ಲಾಗಲಿ ಖರ್ಚುಮಾಡತಕ್ಕ ಅಭ್ಯಾಸ ನಿಲ್ಲಬೇಕೆಂದು ಆದೇಶ ಕೊಟ್ಟಿದ್ದೇವೆ. ಈ ಬಗ್ಗೆ ಬಹಳ ಜಾಗ್ರತೆ ಯಾಗಿಯೇ ಕ್ರಮ ತೆಗೆದುಕೊಂಡಿದ್ದೇವೆಂದು ಮಾನ್ಯ ಸದಸ್ಯರಿಗೆ ಹೇಳುತ್ತೇನೆ.

ಶ್ರೀ ಬಿ. ಜಿ. ಬಣಕಾರ್.—ಸಮಾಜ ಕಲ್ಯಾಣದ ಸಲುವಾಗಿ ಹಣ ಖರ್ಚುಮಾಡುವ ಸಂದರ್ಭದಲ್ಲಿ ಏನಾದರೂ ಅಕ್ರಮಗಳು ನಡೆದಿವೆಯೆ ? ಹಾಗೆ ನಡೆದಿದ್ದರೆ ಯಾವ ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಎನ್. ರಾಚಯ್ಯ.—ಆಗಲೇ ಉತ್ತರ ಕೊಟ್ಟಿದ್ದೇನೆ. ಅಂಥ ಅವ್ಯವಹಾರಗಳು ಏನಾದರೂ ನಡೆದರೆ, ಆಡಳಿತದಲ್ಲಿ ಏನಾದರು ಲೋಪದೋಷಗಳಿದ್ದರೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಂಡು ಸರಿಪಡಿಸುತ್ತೇವೆ.

ಶ್ರೀ ಬಿ. ಜಿ. ಬಣಕರ್ —ಅಂಥ ನಿದರ್ಶನಗಳಂ ಇವೆಯೇ ?

ಶ್ರೀ ಎನ್. ರಾಚಯ್ಯ.—ಅಂಥ ನಿದರ್ಶನಗಳು ನಮ್ಮ ಗಮನಕ್ಕೆ ಬಂದಿಲ್ಲ ಬಂದರೆ ಕ್ರಮಂ ತೆಗೆದು ಕೊಳ್ಳುವುದಕ್ಕೆ ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶ ಕೊಡುತ್ತೇವೆ.

Bamboos for Repair of Hariyan Houses

360 SRI S. M. SHEERNALY CHANDRASEKHAR (Hosanagar)—Will the Minister for Rural Development and Social Welfare be pleased to state:—

(a) Whether the Government is aware that Harijans are not permitted to take bamboos from forest to repair their houses;

(b) whether the Government intend to issue suitable instructions to the Taluk Development Boards to incur expenditure out of 18 per cent grants towards purchase of bamboos or wood required for the repair of the houses of the Harijans;

(c) whether the Government has any proposal to issue instruction to the Forest Department to supply bamboos to Harijans to repair their houses ?

SRI N. RACHIAH — (Minister for Rural Development and Social Welfare) —

(a) Yes.

(b) Government have already iss ed instructions,

(c) Bamboos are being supplied from the Bamboos Depots of the Forest Department at scheduld rates for repairs of houses to all irrespective of whether they are harijans or otherwise.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.— ಮಲೆನಾಡಿನಲ್ಲಿ ಮೊದಲು ಹರಿಜನರು ಮನೆ ರಿಪೇರಿ ಮಾಡಿಕೊಳ್ಳುವುದಕ್ಕೆ ಗಳಗಳನ್ನು ಕಾಡಿನಿಂದ ತರುತ್ತಿದ್ದರು. ಈಗ ಅವರು ಅದಕ್ಕೆ ಅವಕಾಶ ಕೊಡದೆ ಡಿಪೋಗಳಿಂದ ಕೊಡಿಸುತ್ತೇವೆಂದು ತಮ್ಮ ಉತ್ತರದಲ್ಲಿ ಹೇಳಿದ್ದೀರಿ ಅವರಿಗೆ ಡಿಪೋಗಳಿಂದ ಹೇರಳವಾಗಿ ಕೊಳ್ಳುವುದಕ್ಕೆ ಹಣ ಇರುವುದಿಲ್ಲ ಎಲ್ಲಾ ಹಳ್ಳಿಗಳಲ್ಲೂ ಡಿಪೋಗಳಿರುವುದಿಲ್ಲ ಎರೆಲ್ಲಾ ತಾಲ್ಲೂಕಿನಲ್ಲಿ ಒಂದ ಕಡೆ ಡಿಪೋ ಇರುತ್ತದೆ. ಆದಕಾರಣ ಅವರಿಗೆ ಡಿಪೋಗಳಿಂದ ಗಳಗಳನ್ನು ಕೂಡುಕೊಂಡು ಮನೆ ರಿಪೇರಿ ಮಾಡಿಕೊಳ್ಳುವುದಕ್ಕಾಗುವುದಿಲ್ಲ ಆದ್ದರಿಂದ ಸರ್ಕಾರದವರು ಮುಫತ್ತಾಗಿ ಮನೆಗಳನ್ನು ರಿಪೇರಿ ಮಾಡಿಸಿಕೊಡುವುದಕ್ಕೆ ಆಗುತ್ತದೆಯೇ ?

†ಶ್ರೀ ಎನ್. ರಾಚಯ್ಯ—ತಾವು ಸಲಹೆ ಮಾಡುತ್ತಿರುವುದನು ಸಂಬಂಧಪಟ್ಟ ಸಚಿವರೊಡನೆ ಮಾತನಾಡಿ ಈ ವಿಚಾರವಲ್ಲಿ ಎಷು ಸೂಕ್ತ ಕ್ರಮ ತೆಗೆದುಕೊಳ್ಳಬಹುದೆಂಬುದನ್ನು ಯೋಚನೆ ಮಾಡುತ್ತೇನೆ.

ಶ್ರೀ ಎಸ್. ಎಂ ಶೀರ್ನಾಳಿ ಚಂದ್ರಶೇಖರ್.— ಈಗ ಮಲೆನಾಡಿನಲ್ಲಿ ಕಟ್ಟಿರುವ ಮನೆಗಳು ಬಿದ್ದು ಹೋಗುವ ಪರಿಸ್ಥಿತಿಯಲ್ಲಿವೆ. ಯಾವುವು ಒಳ್ಳೆಯ ಸ್ಥಿತಿಯಲ್ಲಿ ಇಲ್ಲವೆಂದನ್ನು ರಿಪೇರಿಮಾಡದಿದ್ದರೆ ಮನೆ ಬಿದ್ದು ಜನಗಳು ಸಾಯುತ್ತಾರೆ ಜೊತೆಗೆ ಮಲೆನಾಡಿನಲ್ಲಿ ಜೂನ್ ತಿಂಗಳಿಗಾಗಲೇ ಹೆವಿ ರೇನ್‌ಫಾಲ್ ಇರುತ್ತದೆ ಆ ಸಂದರ್ಭದಲ್ಲಿ ಬಹಳ ಮನೆಗಳು ಬಿದ್ದು ಹೋಗುತ್ತದೆ ಈ ಬಗ್ಗೆ ನೀವು ಚರ್ಚೆ ಮಾಡಿ ವಿಚಾರ ಮಾಡಿ ಕ್ರಮ ತೆಗೆದುಕೊಳ್ಳಬೇಕಾದರೆ ತಿಂಗಳುಗಟ್ಟಲೆ ಆಗುತ್ತದೆ. ಆದಕಾರಣ ಈ ಬಗ್ಗೆ ತಾವು ತೀವ್ರಕ್ರಮ ತೆಗೆದುಕೊಳ್ಳಲು ಪ್ರಯತ್ನ ಮಾಡುತ್ತೀರಾ ?

ಶ್ರೀ ಎನ್. ರಾಚಯ್ಯ:— ಸಂಬಂಧಪಟ್ಟ ಇಲಾಖೆಯವರು ಡಿಪೋಗಳ ಮೂಲಕ ಬಂಬುಗಳನ್ನು ಸರಬರಾಜು ಮಾಡುವುದಕ್ಕೆ ಒಪ್ಪಿಕೊಂಡಿದ್ದಾರೆ ಬೇರೆ ರೀತಿ ವ್ಯವಸ್ಥೆ ಮಾಡುವುದಕ್ಕೆ ಹೋದರೆ ಹರಿಜನರಿಗೆ ರಿಯಾಯಿತಿ ತೋರಿಸಿದಂತಾಗಿ ಬೇರೆಯವರು ಕೂಡ ಅರಣ್ಯ ಸಂಪತ್ತನ್ನು ಉಪಯೋಗಿಸಿಕೊಳ್ಳಲು ಹೋಗಿ ಹೆಚ್ಚು ಕತಿವೆ ಮಾಡಬಹುದೆಂಬುದು ಸಂಬಂಧಪಟ್ಟ ಇಲಾಖೆಯ ಒಂದು ಸಂಶಯ ಆದುದರಿಂದ ನಾನು ನೇರವಾಗಿ ಯಾವ ವಿಧವಾದ ಉತ್ತರವನ್ನು ಕೊಡುವುದಕ್ಕೆ ಸಾಧ್ಯವಿಲ್ಲ ಆದರೆ ಅಣಿಪಾರಿಗಳನ್ನು ಸುಧಾರಿಸುವುದಕ್ಕೆ ಪರಿಹಾರ ಮಾಡುವುದಕ್ಕೆ ಸಂಬಂಧಪಟ್ಟ ಸಚಿವರೊಡನೆ ಮಾತನಾಡುತ್ತೇನೆ.

ಶ್ರೀ ಟಿ. ಎಂ ಮುಂಜುನಾಥ್.—ನಮ್ಮ ತಾಲ್ಲೂಕಿನಲ್ಲಿ ಹರಿಜನರ ಗುಡಿಸಲುಗಳು ಬೆಂದು ಹೋದವು ಆಗ ನಾನು ಬಂಬುಗಳನ್ನು ಕೊಡಿಸುವುದಕ್ಕಾಗಿ ತಾಲ್ಲೂಕ್ ಬೋರ್ಡಿನವರನ್ನು ಕೇಳಿದ್ದಕ್ಕೆ ಅರಣ್ಯ ಇಲಾಖೆಯವರೊಡನೆ ವ್ಯವಹರಿಸಿ ಎಂದರು ಬಂಬುಗಳ ಟ್ರಾನ್ಸ್‌ಪೋರ್ಟ್ ಚಾರ್ಜನ್ನು ತಾಲ್ಲೂಕ್ ಬೋರ್ಡಿನವರು ಕೊಡಬೇಕೆಂದು ಸರ್ಕಾರದವರು ಸೂಚನೆ ಕೊಟ್ಟಿರುವುದು ನನ್ನ ಗಮನಕ್ಕೆ ಬಂದಿಲ್ಲ ಈಗಾಗಲೇ ತಾಲ್ಲೂಕು ಬೋರ್ಡಿನವರು ನಮ್ಮ ದೇಶದಲ್ಲಿ ಬಾಡಿಗೆ ರೂಪದಲ್ಲಿ ಒಟ್ಟು ಎಷ್ಟು ಪೊಬಲಗನ್ನು ಎಷ್ಟು ಜನಕ್ಕೆ ಕೊಟ್ಟಿದ್ದಾರೆ ?

ಶ್ರೀ ಎನ್. ರಾಚಯ್ಯ,— ತಾವು ಬೇರೆ ನೋಟಿಸ್ ಕೊಟ್ಟರೆ ಉತ್ತರಕೊಡುತ್ತೇನೆ. ಆದರೆ ತಮಗೆ ಒಂದು ವಿಷಯ ತಿಳಿಸುತ್ತೇನೆ. 1974ನೇ ಇಸವಿಯಲ್ಲಿ ಅಲ್ಲಿ ಕೊಟ್ಟಿರತಕ್ಕ ರೀತಿ ನನಗೆ ಗೊತ್ತಿದೆ ಆದನ್ನು ಸರಿಯಾಗಿ ತಿಳಿಸುತ್ತೇನೆ. ತಮಗೆ ಬೇಕಾದರೆ ಒಂದು ಆರ್ಡರ್ ಕಾಪಿಯನ್ನು ಸಹ ಕಳುಹಿಸುತ್ತೇನೆ ಈ ವಿಷಯದಲ್ಲಿ ಸರ್ಕಾರದ ಒಂದು ನಿರ್ದಿಷ್ಟವಾದ ಧೋರಣೆ ಏನೆಂದರೆ ಹಿಂದೆ ಜನತಾ ಹೌಸಿಂಗ್ ಯೋಜನೆ ಏನು ಇತ್ತೋ ಅದು ಜಾರಿಗೆ ಬರುವುದಕ್ಕೆ ಮುಂಚೆ ತಾವು

ಹೇಳಿದ ರೀತಿಯಲ್ಲಿ ನಡೆಯುತ್ತಿತ್ತೆಂಬುದನ್ನು ಒಪ್ಪಿಕೊಳ್ಳುತ್ತೇನೆ ಈಗ ಕೇವಲ 2-3 ದಿವಸಗಳ ಹಿಂದೆ ಪೆರಿಯಪಟ್ಟ ತಾಲ್ಲೂಕಿನ ನರುವಾಡಿ ಮತ್ತು ಬೆಟ್ಟದ ತುಂಗ ಎಂಬ ಗ್ರಾಮಗಳನ್ನು ಬೆಂಕಿ ಬಿದ್ದ ಕಾರಣ ಒಬ್ಬ ಹುಡುಗ ಆ ಬೆಂಕಿಯಲ್ಲಿ ಸಿಕ್ಕಿ ಸತ್ತಿದ್ದಾನೆ ಈ ಎರಡು ಗ್ರಾಮಗಳಲ್ಲಿ ಎನು ಒಂದು ಪಾಲಿಸಿಯನ್ನು ನಿರ್ಧಾರ ಮಾಡಿದ್ದಾರೋ ಅವಕ್ಕೆ ಮಾನ್ಯ ಮಂತ್ರಿಗಳು ಒಪ್ಪಿಕೊಂಡಿದ್ದಾರೆ. ಹರಿಜನರ ಕೇರಿಗಳಲ್ಲಿ ಎಲ್ಲೆಲ್ಲಿ ಬೆಂಕಿ ಬೀಳುತ್ತದೋ ಅವರೆಲ್ಲರಿಗೂ ಕೂಡ ಸೈಟುಗಳನ್ನು ಕೊಡುವುದರ ಜೊತೆಗೆ ಜನತಾ ಹೌಸಿಂಗ್ ಸ್ಕೀಂ ನಲ್ಲಿ ಎಷ್ಟು ಮನೆಗಳು ಸುಟ್ಟಿವೆಯೋ ಅಷ್ಟು ಮನೆಗಳನ್ನು ಕಟ್ಟುವುದಕ್ಕೆ ಹಣ ಸಹಾಯ ಮಾಡುವುದಕ್ಕೆ ಏರ್ಪಾಡು ಮಾಡಿದ್ದೇವೆ. ನಿಲುವಾಡಿಯಲ್ಲಿ 25 ಮನೆಗಳು ಸುಟ್ಟವು ಅವರು 30 ಮನೆಗಳು ಬೇಕೆಂದು ಕೇಳಿದ್ದಕ್ಕೆ ಅಷ್ಟನ್ನು ಕಟ್ಟಿಸಿ ಕೊಡುವುದಕ್ಕೆ ನಾವು ಒಪ್ಪಿಕೊಂಡಿದ್ದೇವೆ. ಬೆಟ್ಟದ ತುಂಗದಲ್ಲಿ 35 ಮನೆಗಳು ಸುಟ್ಟವು ಅವರು 42 ಮನೆಗಳು ಬೇಕೆಂದುದಕ್ಕೆ ಜನತಾ ಹೌಸಿಂಗ್ ಯೋಜನೆ ಪ್ರಕಾರ ಧನಸಹಾಯ ಕೊಡುವುದಕ್ಕೆ ಸಿದ್ಧರಾಗಿದ್ದೇವೆ. ಆದುದರಿಂದ ನಾವು ಘನನರ್ಕಾರದ ಈ ಒಂದು ಧೋರಣೆಯನ್ನು ಮೆಚ್ಚುತ್ತೇವೆಂದು ತಿಳಿದುಕೊಂಡಿದ್ದೇನೆ.

ಬಂಗಾರುಪೇಟೆ ತಾಲ್ಲೂಕಿನಲ್ಲಿ ಪಿ.ಎಲ್.ಡಿ ಬ್ಯಾಂಕಿನಿಂದ ಬಾವಿ ತೋಡಿಸುವುದಕ್ಕೆ ಸಾಲ

೫೧೧ ಶ್ರೀ ಕೆ.ಎಂ.ದೊರೆಸ್ವಾಮಿನಾಯ್ಡು (ಬೇತಮಂಗಲ) .— ಸಹಕಾರ ಮಂತ್ರಿಗಳು ಈ ವಿಷಯಂಗಳನ್ನು ದಯೆಯಿಟ್ಟು ತಿಳಿಸುವರೆ:—

(ಅ) ಬಂಗಾರುಪೇಟೆ ತಾಲ್ಲೂಕಿನಲ್ಲಿ ಪಿ.ಎಲ್.ಡಿ. ಬ್ಯಾಂಕಿನಿಂದ ಬಾವಿಗಳನ್ನು ಮಾಡಿಸಲು ೧೯೬೫ರಿಂದ ಎಷ್ಟು ಜನ ರೈತರಿಗೆ ಸಾಲಗಳನ್ನು ಕೊಟ್ಟಿರುತ್ತಾರೆ;

(ಆ) ಕೊಟ್ಟಿರತಕ್ಕ ರೈತರ ಪೈಕಿ ಎಷ್ಟು ಜನ ರೈತರು ಬಾವಿಗಳನ್ನು ಪೂರ್ತಿ ಮಾಡಿರುತ್ತಾರೆ; ಎಷ್ಟು ಜನ ರೈತರು ಪೂರ್ತಿ ಮಾಡಿರುವುದಿಲ್ಲ;

(ಇ) ಇವರುಗಳ ಪೈಕಿ ಎಷ್ಟು ಜನ ರೈತರು ಬಾವಿಗಳಲ್ಲಿ ಬಂಡೆ ಬಿದ್ದು ಪೂರ್ತಿಮಾಡಲು ಸಾಧ್ಯವಿಲ್ಲದೆ ಅವುಗಳನ್ನು ತನಿಖೆ ಮಾಡಿಸಬೇಕೆಂದು ಮತ್ತು ಇವುಗಳನ್ನು ಪರೀಕ್ಷಿಸಿ ಲೋನು ಕೊಟ್ಟಿರುವುದನ್ನು ವಜಾ ಮಾಡಬೇಕೆಂದು ಅರ್ಜಿಗಳನ್ನು ಕೊಟ್ಟಿರುತ್ತಾರೆ;

(ಈ) ಎಷ್ಟು ಬಾವಿಗಳನ್ನು ಇದುವರೆಗೂ ತನಿಖೆ ಮಾಡಲಾಗಿದೆ;

(ಉ) ತನಿಖೆ ಮಾಡದೆ ಇದ್ದರೆ, ಇದಕ್ಕೆ ಕಾರಣಗಳೇನು;

(ಊ) ಈ ಬಗ್ಗೆ ರೈತರು ಅನೇಕ ಅರ್ಜಿಗಳನ್ನು ಕೊಟ್ಟಿದ್ದರೂ ಸಹಾ ತನಿಖೆ ನಡಸದೇ ಅವರ ಕಂತುಗಳ ಹಣಗಳನ್ನು ವಸೂಲು ಮಾಡಲು ಜಪ್ತಿ ವಗೈರೆ ನಡೆಯುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ.ಎಚ್.ರಂಗನಾಥ್ (ಸಹಕಾರ ಮಂತ್ರಿಗಳು)

(ಅ) ೧೮೬೩

(ಆ) ೯೭೩ ಬಾವಿಗಳು ಪೂರ್ತಿಯಾಗಿರುತ್ತವೆ. ೮೯೦ ಬಾವಿಗಳು ಪೂರ್ತಿಯಾಗಿಲ್ಲ.

(ಇ) ೬೦ ಜನ ರೈತರು.

(ಈ) ೫೪.

(ಉ) ಉಳಿದ ಅರ್ಜಿಗಳು ಸದ್ಯದಲ್ಲಿ ಬಂದಿವೆ.

(ಊ) ಬಾವಿಗಳು ಉಪಯೋಗವಿಲ್ಲವೆಂದು ಖಚಿತವಾಗುವವರೆವಿಗೂ ವಸೂಲಾತಿ ಕ್ರಮ ಬದ್ಧವಾಗಿರುತ್ತದೆ.

ಶ್ರೀ ಕೆ.ಎಂ.ದೊರೆಸ್ವಾಮಿನಾಯಡ್ಡಿ.— ಸ್ವಾಮಿ, ೧೮೬೩ ಬಾವಿಗಳ ಪೈಕಿ ೯೭೩ ಬಾವಿಗಳು ಪೂರ್ತಿಯಾಗಿರುತ್ತವೆ, ಇನ್ನು ೮೯೦ ಬಾವಿಗಳು ಪೂರ್ತಿಯಾಗಿಲ್ಲ ಎಂದು ತಮ್ಮ ಉತ್ತರದಲ್ಲಿ ತಿಳಿಸಿದ್ದೀರಿ, ಈಗ ೧೧ ವರ್ಷಗಳಾದರೂ ಕೂಡ ಈ ಬಾವಿಗಳು ಪೂರ್ಣವಾಗದೆ ಇರುವುದಕ್ಕೆ ಕಾರಣ ಏನು ?